# ಮಕ್ಕಳ ಪೋಷಣೆಯ ಕಷ್ಟ–ಸುಖ

■ ಲಾವಣ್ಯಗೌರಿ ವೆಂಕಟೇಶ್

ಪೋಷಕರು ಬೈದರು ಎಂದು ಹದಿಹರೆಯದ ಮಕ್ಕಳು ಕೋಪಿಸಿಕೊಂಡು ಮನೆಬಿಟ್ಟು ಹೋಗುವುದು ಇತ್ತೀಚೆಗೆ ಹೆಚ್ಚಾಗಿದೆ. ಶೈಕ್ಷಣಿಕ ವರ್ಷದ ಮಧ್ಯೆ ನಡೆಯುವ ಕಿರುಪರೀಕ್ಷೆಯ ವಿಷಯವನ್ನೂ ಮಕ್ಕಳು ಹಾಗೂ ಪೋಷಕರು ಗಂಭೀರವಾಗಿ ಪರಿಗಣಿಸಿದ್ದರಿಂದ ಈ ರೀತಿಯ ಘಟನೆಗಳು ನಡೆಯುತ್ತಿವೆ. ಇದು ಕೇವಲ ಶಾಲೆಯ ಪರೀಕ್ಷೆಯೇ ಎಂದಲ್ಲ; ಓರಗೆಯ ಮಕ್ಕಳು ಗೇಲಿ ಮಾಡಿದರೆಂದು ಅಥವಾ ಪೋಷಕರ ಒತ್ತಡ ತಾಳಲಾಗುತ್ತಿಲ್ಲವೆಂದು, ಟೀವಿ ನೋಡಲು ಬಿಡಲಿಲ್ಲ ಎಂದು, ಮೊಬೈಲ್ ಕೊಡಿಸಲಿಲ್ಲ ಎಂದು ಹೀಗೆ ಮಕ್ಕಳು ಮನೆಯಿಂದ ಪರಾರಿಯಾಗಲು ಹತ್ತಾರು ಕಾರಣಗಳು ಕಂಡು ಬರುತ್ತಿವೆ.

ಸಣ್ಣ ಕುಟುಂಬಗಳೇ ಹೆಚ್ಚಾಗಿರುವ ಈಗಿನ ಕಾಲದಲ್ಲಿ ಪೋಷಕರಿಬ್ಬರ ಸಂಪಾದನೆಯಿಂದ ಮಕ್ಕಳಿಗೆ ಎಷ್ಟು ಸಾಧ್ಯವೋ ಅಷ್ಟೂ ಐಷಾರಾಮಿ ಜೀವನವನ್ನು ಕೊಡಲು ಪೋಷಕರು ಪ್ರಯತ್ನಿಸುತ್ತಾರೆ. ಕಷ್ಟದ ಅರಿವೇ ಇಲ್ಲದ ಮಕ್ಕಳಿಗೆ ಜೀವನದಲ್ಲಿ ಸ್ವಲ್ಪ ಏರುಪೇರಾದರೂ ಸಹಿಸುವ ಸಹನೆ, ಶಕ್ತಿ ಇರುವುದಿಲ್ಲ. ಇವೆಲ್ಲಕ್ಕೂ ಮುಖ್ಯವಾದ ಕಾರಣ ಸಂವಹನಸಂಪರ್ಕದ ಕೊರತೆ. ಮನೆಯಲ್ಲಿರುವ ಮೂರು ಮತ್ತೊಂದು ಜನರೂ ಒಂದೊಂದು ಯಂತ್ರಗಳಂತೆ ಮತ್ತೊಂದು ಯಂತ್ರಕ್ಕೆ (ಟೀವಿ ಅಥವಾ ಮೊಬೈಲ್) ಅಂಟಿ ಕುಳಿತಿರುತ್ತಾರೆ. ಮನೆಯಲ್ಲಿ ಮಾತುಕತೆ ಸೊನ್ನೆ. ಹೀಗಿರುವಾಗ ಒಬ್ಬರಿಗೊಬ್ಬರು ಭಾವನೆಗಳನ್ನು ಹಂಚಿಕೊಳ್ಳುವುದಾದರೂ ಹೇಗೆ? ಭಾವನೆಗಳ ವಿನಿಮಯವೇ ಇಲ್ಲದೆ ಪ್ರತಿಯೊಬ್ಬರೂ ಪರಕೀಯರಾಗುತ್ತಾ ಹೋಗುತ್ತಾರೆ.

ಈಗಿನ ಮಕ್ಕಳೇ ಹೆಚ್ಚು ಸೂಕ್ಷ್ಮಮತಿಗಳು ಆಗುತ್ತಿದ್ದಾರಾ? ಅಥವಾ ಈಗಿನ ಪೋಷಕರ ಪಾಲನೆಯಲ್ಲಿ ದೋಷವಿದೆಯೋ? ಈಗಿನ ಕಾಲದಲ್ಲಿ ಮಕ್ಕಳಿಗೆ ಬುದ್ಧಿವಂತರಾಗಲು ಅಥವಾ ಅವರ ಬುದ್ಧಿಯನ್ನು ಅನಾವರಣಗೊಳಿಸಲು ಹಲವು ಹತ್ತು ದಾರಿಗಳಿವೆ. ಕೈಗೆಟಕುವ ರೀತಿಯಲ್ಲಿ ಅಂತರ್ಜಾಲದ ಬಳಕೆ, ದೂರದರ್ಶನ ಹಾಗೂ ಬಹುತೇಕ ಆಧುನಿಕ ತಾಂತ್ರಿಕತೆ, ಮಕ್ಕಳ ಬುದ್ಧಿವಂತಿಕೆಯನ್ನು ತೆರೆದಿಡುವಲ್ಲಿ ಯಶಸ್ವಿಯಾಗಿವೆ. ಜೊತೆಗೆ ಇವು ಬುದ್ಧಿ ಕೆಡಿಸಲೂ ಸಹಾ ನೆರವು ನೀಡುತ್ತವೆ ಎಂಬುದರಲ್ಲಿ ಸಂದೇಹವೇ ಇಲ್ಲ.

ಎಲ್ಲಾ ಪೋಷಕರೂ ಒಮ್ಮೆ ಮಕ್ಕಳಾಗಿದ್ದವರೇ ತಾನೇ? ತಮ್ಮ ಬಾಲ್ಯಕ್ಕೂ ತಮ್ಮ ಮಕ್ಕಳ ಬಾಲ್ಯಕ್ಕೂ ಬಹಳ ವ್ಯತ್ಯಾಸವಿದೆಯೆಂದು ಹೇಳುತ್ತಾರೆಯೇ ಹೊರತು, ಯಾವ ರೀತಿಯ ವ್ಯತ್ಯಾಸ ಎಂದು ಖಂಡಿತಾ ತಿಳಿದಿಲ್ಲ. ಈಗಿನ ಪೋಷಕರು ಚಿಕ್ಕವರಿದ್ದಾಗ ಅಥವಾ ಇನ್ನೂ ಹಿಂದೆ, ಪೋಷಕರ 'ಓದು' ಎನ್ನುವ ಒತ್ತಡ ಮಕ್ಕಳ ಮೇಲಿರಲಿಲ್ಲ. ಅದಕ್ಕೂ ಮಿಗಿಲಾಗಿ ಅಂದಿನ ಮಕ್ಕಳಿಗೆ ಹೊರಗಿನ ಪ್ರಪಂಚದ ಅರಿವಾಗುತ್ತಾ ಇದ್ದುದೇ ಅವರು ವಯಸ್ಕರಾದ ನಂತರ! ಮಕ್ಕಳು ಬೆಳೆದು ದೊಡ್ಡವರಾಗುವವರೆಗೂ ಪೋಷಕರ ಮಾತೇ ಅವರಿಗೆ ವೇದವಾಕ್ಯ. ತಂತ್ರಜ್ಞಾನದ ಮೂಲಕ, ಮಾಧ್ಯಮಗಳ ಮೂಲಕ ಇಂದಿನ ಮಕ್ಕಳಿಗೆ 'ಎಕ್ಸ್‌ಪೋಷರ್' ಹೆಚ್ಚು. ಇದರಿಂದ ಜ್ಞಾನದ ಮಟ್ಟ ಹೆಚ್ಚುತ್ತದೆಯೇ ಹೊರತು ಬುದ್ಧಿಯಲ್ಲ! ಈಗಿನ ಬಹುತೇಕ ಮಕ್ಕಳಿಗೆ ಸ್ವತಂತ್ರವಾಗಿ ಸಾರ್ವಜನಿಕ ಸಾರಿಗೆಯಲ್ಲಿ ಪಯಣಿಸಿ ಗೊತ್ತಿಲ್ಲ. ಇನ್ನೂ ಕೆಲವು ಮಕ್ಕಳಿಗೆ ವಯಸ್ಸು 1314 ದಾಟಿದರೂ ರಸ್ತೆ ದಾಟಲು ಬರುವುದಿಲ್ಲ! ಇದರರ್ಥ ಮಕ್ಕಳು ಸಾಮರ್ಥ್ಯರಹಿತರು ಎಂದಲ್ಲ. ಇದಕ್ಕೆ ಕಾರಣ ಅತೀ ಮುದ್ದಿನಿಂದ ಮಕ್ಕಳನ್ನು ಪೋಷಿಸುತ್ತಿರುವ ಪೋಷಕರ ವ್ಯಾಕುಲತೆ ಹಾಗೂ ಕಕ್ಕುಲತೆ. ಇದು ಬರೀ ಶ್ರೀಮಂತ ಪೋಷಕರ ಕತೆಯಲ್ಲ. ಬಡ ಮಧ್ಯಮ ವರ್ಗದವರೂ ಕೂಡಾ ತಮಗೆ ಕಷ್ಟವಾದರೂ ಮಕ್ಕಳಿಗೆ ಐಷಾರಾಮಿ ಬದುಕನ್ನು ಕಟ್ಟಿಕೊಡುವುದರಲ್ಲಿ ಹಿಂದೆ ಬಿದ್ದಿಲ್ಲ.

### ಪೋಷಕರು ಗಮನಿಸಬೇಕಾದ ಕೆಲವು ಸಂಗತಿಗಳಿವೆ:



★ ಪ್ರತಿಯೊಬ್ಬ ಮಕ್ಕಳೂ ಭಿನ್ನ ಅಭಿರುಚಿ, ಆಸಕ್ತಿ, ಕುತೂಹಲ, ಉತ್ಸುಕತೆ ಹಾಗೂ ಒಲವು ಹೊಂದಿರುತ್ತಾರೆ. ಒಂದು ಮಗುವಿದ್ದಂತೆ ಮತ್ತೊಂದಿರುವುದಿಲ್ಲ. ಯಾವ ವಯಸ್ಸಿನ ಮಕ್ಕಳೇ ಆಗಲಿ ಅವರನ್ನು ಸ್ನೇಹಿತರೊಟ್ಟಿಗೆ ಅಥವಾ ಸಹೋದರ, ಸಹೋದರಿಯರ ಜೊತೆಗೆ ಹೋಲಿಸಬೇಡಿ. ಇದು ಅವರಲ್ಲಿ ಕೀಳರಿಮೆ ಹೆಚ್ಚಿಸುತ್ತದೆ. ಮಕ್ಕಳು ಹೋಲಿಕೆಯನ್ನು ಸಹಿಸುವುದಿಲ್ಲ.

★ ಸೂಕ್ಷ್ಮಮತಿಯ ಮಕ್ಕಳು ಭಾವೋದ್ವೇಗಕ್ಕೆ ಒಳಗಾಗುವುದು ಹೆಚ್ಚು. ಇದಕ್ಕಾಗಿ ಅವರನ್ನು ಅಳುಬುರುಕ/ಅಳುಬುರುಕಿ ಎಂದೆಲ್ಲಾ ಹಂಗಿಸಬೇಡಿ. ಈ ರೀತಿ ಮಾಡುವುದರಿಂದ ಸರಿ ಹೋಗುವ ಬದಲು, ಇನ್ನಷ್ಟು ಮಾನಸಿಕವಾಗಿ ಕುಸಿಯುತ್ತಾರೆ. ಶಿಸ್ತು ರೂಢಿಸಲು ಎಲ್ಲಾ ಮಕ್ಕಳಿಗೂ ಒಂದೇ ಬಗೆಯ ಅಸ್ತ್ರವನ್ನು ಉಪಯೋಗಿಸಲು ಸಾಧ್ಯವಿಲ್ಲ. ಕೆಲವು ಮಕ್ಕಳು ಎಲ್ಲರೊಂದಿಗೂ ಬೆರೆಯಲು ಇಷ್ಟ ಪಡುವುದಿಲ್ಲ, ಗುಂಪಿನಲ್ಲಿ ಸೇರುವುದಿಲ್ಲ. ಅದು ಅವರ ಸ್ವಭಾವ. ಅವರನ್ನು ಅವರದಲ್ಲದ ಕ್ಷೇತ್ರದಲ್ಲಿ ನಿಲ್ಲಿಸಲು ಪ್ರಯತ್ನಿಸಬೇಡಿ.

★ ನಯವಾದ ಹಾಗೂ ಮೃದುವಾದ ಶಿಸ್ತುಪಾಲನೆ ನಿಶ್ಚಿತವಾಗಿ ಇರಬೇಕು. ಹಾಗೆಂದು ಎಲ್ಲಾ ವಯಸ್ಸಿನ ಮಕ್ಕಳಿಗೂ ಒಂದೇ ರೀತಿಯ ಶಿಸ್ತುಪಾಲನೆ ಸಮಂಜಸವಲ್ಲ. ಐದು ವರ್ಷದ ಮಗುವಿಗೆ ತಪ್ಪುಸರಿಗಳ ಅರಿವು ಸ್ವಲ್ಪ ಮಟ್ಟಿಗೆ ಇರುತ್ತದೆ. ಅವರಿಗೆ ಸುತ್ತಿ ಬಳಸಿ ಹೇಳುವ ಬದಲು ನೇರವಾಗಿ ಹೇಳುವ ಮಾತನ್ನು ಆದೇಶಿಸಿ. ಕೆಲವು ಮಕ್ಕಳು ಕೇಳುತ್ತಾರೆ. ಕೆಲವು ಮಕ್ಕಳು ಕೇಳದೆ ಉದಾಸೀನ ಮಾಡುತ್ತಾರೆ. ಕೇಳದ ಮಕ್ಕಳಿಗೆ ಪದೇ ಪದೇ ಹೇಳಿ ತಾಳ್ಮೆ ಕಳೆದುಕೊಳ್ಳಬೇಡಿ. ಅವರನ್ನು ಅವರ ಪಾಡಿಗೆ ಸ್ವಲ್ಪ ಹೊತ್ತು ಬಿಟ್ಟು ಬಿಡಿ. ಕೆಲ ಸಮಯದ ನಂತರ ಸರಿ ಹೋಗುತ್ತಾರೆ.

★ ಮಕ್ಕಳು ಬೆಳೆದಂತೆ ನಿಮ್ಮ ಯೋಜನೆಗಳೂ ಬೆಳೆಯುತ್ತಾ ಹೋಗಬೇಕು. ಎಳೆಯರ ಮೇಲೆ ಅನುಸರಿಸುತ್ತಿದ್ದ ಶಿಸ್ತುಪಾಲನೆಯನ್ನು ಟೀನೇಜ್ ಮಕ್ಕಳ ಮೇಲೆ ಹೇರಲಾಗುವುದಿಲ್ಲ. ಮಕ್ಕಳ ದೇಹ ಬೆಳೆದಂತೆ ಅವರಲ್ಲಿ ಮಾನಸಿಕ, ದೈಹಿಕ ಬದಲಾವಣೆಗಳು ಉಂಟಾಗುತ್ತವೆ. ಹಾರ್ಮೋನ್‌ಗಳ ಅಸಮತೋಲನದಿಂದ ಸಿಡುಕುವುದು, ಚಿಂತಾಕ್ರಾಂತರಾಗಿ ಕಾಣುವುದು, ಒತ್ತಡಕ್ಕೊಳಗಾದಂತೆ ತೋರುವುದು ಮುಂತಾದ ಅನೇಕ ಭಾವನೆಗಳನ್ನು ಹೊಂದಿರುತ್ತಾರೆ. ಇದನ್ನರಿತು ಪೋಷಕರು ಮಕ್ಕಳ ಜೊತೆ ಬೆರೆಯಬೇಕು.

★ ಫಲಾಪೇಕ್ಷೆಯಿಲ್ಲದೆ ಯಾರೂ ಕೆಲಸ ಮಾಡುವುದಿಲ್ಲ. ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ತಕ್ಷಣವೇ ಆಗಬೇಕು. ಅದು ಒಳ್ಳೆಯತನಕ್ಕಾಗಲೀ ಅಥವಾ ಕೆಟ್ಟತನ